ಶ್ರೀ ಲಕ್ಷ್ಮೀಸರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ಸೇವೆಯಲ್ಲಿದ್ದಾಗಲೇ ತೀರಿಕೊಂಡ ನೌಕರರ ಕುಟುಂಬದ ಸದಸ್ಯರಿಗೆ ನೌಕರಿ ಒದಗಿಸಬೇಕೆಂದು ಕೋರಿ ಮಂಡಳಿಗೆ ಬಂದ ಅರ್ಜಿಗಳ ಸಂಖ್ಯೆ ಕೆಳಕಂಡಂತಿದೆ.

೧೯೮೪-೮೫	೨೫೧
೧೯೮೫-೮೬	೨೨೫
೧೯೮೬-೮೭	೨೪೦

ಆ) ಆನುಸಂಪದ ಆಧಾರದ ಮೇಲೆ ನೌಕರಿ ನೀಡಿದ ಬಗ್ಗೆ ವಿವರ

೧೯೮೪-೮೫	೧೫೫
೧೯೮೫-೮೬	೨೫೩
೧೯೮೬-೮೭	೧೦೮

ಇ) ಅರ್ಜಿದಾರರಿಂದ ಪೂರ್ಣ ಮಾಹಿತಿ ದೊರೆತ ನಂತರ ತ್ವರಿತವಾಗಿ ವಿಲೇವಾರಿ ಮಾಡಲಾಗುತ್ತದೆ, ಆದರೆ ಪೂರ್ಣ ಮಾಹಿತಿ ದೊರಕಿರುವ ಸಂದರ್ಭಗಳಲ್ಲೆಲ್ಲಾ ಅರ್ಜಿದಾರರಿಗೆ ನೌಕರಿ ಒದಗಿಸಿಕೊಟ್ಟಿದೆ ಉತ್ತರಿಸಲಾಗಿದೆ

ಬಳ್ಳಾರಿ ಜಿಲ್ಲೆ ಫಾರೆಸ್ಟ್ ಗಾರ್ಡ್‌ಗಳ ಆಯ್ಕೆ

೭೭೮. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅರಣ್ಯ ರಕ್ಷಕರ ನೇಮಕಾತಿಗಾಗಿ ಬಳ್ಳಾರಿಯಲ್ಲಿ ಆಯ್ಕೆ ನಡೆದಿರುವುದು ನಿಜವೇ ? ಹಾಗಿದ್ದಲ್ಲಿ ಎಷ್ಟು ಹುದ್ದೆಗಳಿಗೆ ಆಯ್ಕೆ ನಡೆದಿದೆ.

ಆ) ಈ ಆಯ್ಕೆ ಮೇರೆಗೆ ಈವರೆಗೂ ಆಜ್ಞೆ ಕಳಿಸದಿರಲು ಕಾರಣಗಳೇನು ?

ಶ್ರೀ ಜಿ. ಎಸ್. ಬಾಗಲಕೋಟಿ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹೌದು, ಸಂದರ್ಶನ ೧೦ ಹುದ್ದೆಗಳಿಗೆ ನಡೆದಿದೆ

ಆ) ಈಗ ಮಾಡಿರುವ ಆಯ್ಕೆ ಸರ್ಕಾರದ ನೇಮಕಾತಿ ನಿಯಮಕ್ಕೆ ಅನುಸಾರವಾಗಿಲ್ಲವಾದುದರಿಂದ ಆಜ್ಞೆ ಕಳಿಸಿಲ್ಲ

ಖಾದಿ ಬೋರ್ಡಿನಿಂದ ಗುಡಿ ಕೈಗಾರಿಕೆಗಳಿಗೆ ಧನ ಸಹಾಯ

೭೮೧. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೭ರಲ್ಲಿ ಗುಡಿ ಕೈಗಾರಿಕೆಗಳ ಧನ ಸಹಾಯಕ್ಕಾಗಿ ಸರ್ಕಾರದಿಂದ ಖಾದಿ ಬೋರ್ಡಿಗೆ ಮಂಜೂರಾದ ಹಣವೆಷ್ಟು.

ಆ) ಇಲ್ಲಿಯವರೆಗೆ ಸದರಿ ಮಂಡಲಿಯವರು ವಿನಿಯೋಗಿಸಿದ ಹಣವೆಷ್ಟು.

ಇ) ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಿನ ಹಣ ವಿನಿಯೋಗವಾಗದಿರಲು ಕಾರಣಗಳೇನು ?

ಶ್ರೀ ಬಿ. ಎ. ಜೀವಿಜಯ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು).—

ಅ) ೧೯೮೭-೮೮ರ ಸಾಲಿಗೆ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದಿಂದ ಗ್ರಾಮಾಂತರ ಅತಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ಒಟ್ಟು ರೂ. ೫,೦೦,೫೯,೦೬೫-೦೦ (ಸಾಲ ರೂಪದಲ್ಲಿ ಸಹಾಯಧನ) ಹಾಗೂ ರಾಜ್ಯ ಸರ್ಕಾರದಿಂದ ವಿಶೇಷ ಘಟಕ ಯೋಜನೆಯಡಿಯಲ್ಲಿ ೩೦.೦೦ ಲಕ್ಷ ರೂಪಾಯಿಗಳು ಪ್ರತ್ಯೇಕವಾಗಿ ಹಿಂದುಳಿದ ಜಾತಿಯವರಿಗೆ ಮಂಜೂರಾಗಿದೆ.